ಬಂದಿದೆ.

ಇ. ಈ ಭಾಗದ ರೈತರಿಗೆ ಅನುಕೂಲವಾಗುವಂತೆ ಬಿಜಾಪುರದಲ್ಲಿ ಆಹಾರ ಸಂಸ್ಕರಣಾ ಘಟಕವನ್ನು ಸ್ಥಾಪಿಸುವ ಉದ್ದೇಶವನ್ನು ಸರ್ಕಾರ ಹೊಂದಿದೆಯೆ;

ಸರ್ಕಾರದ ವತಿಯಿಂದ ಆಹಾರ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸುವ ಪ್ರಸ್ತಾವನೆಗಳು ಇರುವುದಿಲ್ಲ. ಆದರೆ ಖಾಸಗಿ ವಲಯದಲ್ಲಿ ಸ್ಥಳೀಯ ಸಂಪನ್ಮೂಲಗಳನ್ನು ಆಧರಿಸಿ ಆಹಾರ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಲು ಮುಂದೆ ಬರುವ ಉದ್ದಿಮೆದಾರರನ್ನು ಹುರಿದುಂಬಿಸಿ ಅವರಿಗೆ ಅವಶ್ಯವಿರುವ ರಿಯಾಯಿತಿ ಮತ್ತು ಉತ್ತೇಜನಗಳನ್ನು ಕಲ್ಪಿಸಲಾಗುವುದು.

ಈ. ಹಾಗಿದ್ದಲ್ಲಿ, ಹೊಸದಾಗಿ ಯಾವ ಯಾವ ಸ್ಥಳಗಳಲ್ಲಿ ಆಹಾರ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಲಾಗುವುದು ಹಾಗೂ ಅದಕ್ಕಾಗಿ ಹಾಕಿಕೊಂಡಿರುವ ಯೋಜನೆಗಳೇನು;

ಈ ದಿಸೆಯಲ್ಲಿ ಬಿಜಾಪುರ ಜಿಲ್ಲೆಯಲ್ಲಿ ರಾಜ್ಯ ಮಟ್ಟದ ಏಕ ಗವಾಕ್ಷಿ ಅನುಮೋದನಾ ಸಮಿತಿ ಸಭೆಯು 7 ಯೋಜನೆಗಳನ್ನು ಅನುಮೋದಿಸಿದ್ದು ಅವುಗಳು ಅನುಷ್ಠಾನ ಹಂತದಲ್ಲಿರುತ್ತವೆ. ಅವುಗಳಿಂದ 27,779 ಲಕ್ಷ ಬಂಡವಾಳ ಹೂಡಿಕೆಯಾಗಲಿದ್ದು 1457 ಜನರಿಗೆ ಉದ್ಯೋಗಾವಕಾಶ ಸಿಗಲಿದೆ. ಈಗಾಗಲೇ ಬಿಜಾಪುರ ಜಿಲ್ಲೆಯಲ್ಲಿ 13 ಆಹಾರ ಸಂಸ್ಕರಣಾ ಘಟಕಗಳು ಪ್ರಾರಂಭವಾಗಲಿದ್ದು ಇದರಿಂದ 26627 ಲಕ್ಷ ಬಂಡವಾಳ ಹೂಡಿಕೆಯಾಗಲಿದ್ದು 3718 ಜನರಿಗೆ ಉದ್ಯೋಗಾವಕಾಶ ದೊರಕಿರುತ್ತದೆ.

ಉ. ಬಿಜಾಪುರದಲ್ಲಿ ಆಹಾರ ಸಂಸ್ಕರಣಾ ಘಟಕವನ್ನು ಯಾವಾಗ ಸ್ಥಾಪಿಸಲಾಗುವುದು?

ಅನುಷ್ಠಾನ ಹಂತದಲ್ಲಿರುವ ಕೈಗಾರಿಕೆಗಳು ಘಟಕವನ್ನು ಪ್ರಾರಂಭಿಸಲು ಹಲವಾರು ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿದ್ದು, ಈ ಕ್ರಮ ತೆಗೆದುಕೊಂಡ ನಂತರ ಉತ್ಪಾದನೆ ಪ್ರಾರಂಬಿಸುತ್ತವೆ.

ಕರ್ನಾಟಕ ಉದ್ಯೋಗ ಮಿತ್ರವು ಬೆಂಗಾವಲು ಸೇವೆಯನ್ನು ಒದಗಿಸುತ್ತದೆ.

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (354)119**

**ವಿಧಾನ ಸಭಾ ಸದಸ್ಯರ ಹೆಸರು : ಶ್ರೀ ಅಪ್ಪಾಜಿ ಚನ್ನಬಸವರಾಜ್ ಶಂಕರ್ ರಾವ್ ನಾಡಗೌಡ**

**ಉತ್ತರಿಸಬೇಕಾದ ಸಚಿವರು : ಜಲಸಂಪನ್ಮೂಲ ಸಚಿವರು (ಶ್ರೀ ಬಸವರಾಜ್ ಬೊಮ್ಮಾಯಿ)**

ಅ) ಭೀಮಾ ನದಿಗೆ ನಿರ್ಮಾಣಗೊಂಡಿರುವ ಬ್ಯಾರೇಜ್‌ಗಳು ಎಷ್ಟು;

ಕೃಷ್ಣಾ ಭಾಗ್ಯ ಜಲ ನಿಗಮದಡಿ ಭೀಮಾ ನದಿಗೆ ಅಡ್ಡಲಾಗಿ 5 ಬ್ಯಾರೇಜುಗಳ ನಿರ್ಮಾಣ ಕೈಗೆತ್ತಿಕೊಳ್ಳಲಾಗಿದೆ ಹಾಗೂ ಸಣ್ಣ ನೀರಾವರಿ ಇಲಾಖೆಯಿಂದ ಭೀಮಾ ನದಿಗೆ ಅಡ್ಡಲಾಗಿ ಇದುವರೆಗೆ ಬಿಜಾಪುರ ಜಿಲ್ಲೆಯಲ್ಲಿ 6 ಮತ್ತು ಗುಲ್ಬರ್ಗಾ ಜಿಲ್ಲೆಯಲ್ಲಿ 2 ಬ್ಯಾರೇಜ್‌ಗಳನ್ನು ನಿರ್ಮಿಸಲಾಗಿದೆ.

ಆ) ಇಂಡಿ ಬ್ರಾಂಚ್ ಕ್ಯಾನೆಲ್‌ನಿಂದ ಈ ಬ್ಯಾರೇಜುಗಳಿಗೆ ನೀರು ಹಾಯಿಸಲು ಸರ್ಕಾರ ಯೋಜಿಸಿದೆಯೇ;

ಇಲ್ಲ

ಇ) ಹಾಗಿದ್ದಲ್ಲಿ, ಈ ವಿಷಯದ ಬಗ್ಗೆ ಸರ್ಕಾರದ ನಿಲುವೇನು?

ಉದ್ಭವಿಸುವುದಿಲ್ಲ

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (355)120**

**ಸದಸ್ಯರ ಹೆಸರು : ಶ್ರೀ ಅಪ್ಪಾಜಿ ಚನ್ನಬಸವರಾಜ್ ಶಂಕರರರಾವ್‌ನಾಡಗೌಡ.**

**ಉತ್ತರಿಸುವ ಸಚಿವರು : (ಶ್ರೀ ಬಸವರಾಜ್ ಬೊಮ್ಮಾಯಿ) ಜಲ ಸಂಪನ್ಮೂಲ ಸಚಿವರು**

ಅ) ಆಲಮಟ್ಟಿ ಎಡದಂಡೆ ಕಾಲುವೆಯ 18ನೇ ಮತ್ತು 21ನೇ ನೀರಿನ ವಿತರಣೆ ಕಾಲುವೆಯಿಂದ ರೈತರ ಜಮೀನುಗಳಿಗೆ ನೀರು ಪೂರೈಕೆ ಮಾಡುವ ಕಾರ್ಯವು ಯಶಸ್ವಿಯಾಗಿದೆಯೆ;

ಆಲಮಟ್ಟಿ ಎಡದಂಡೆ ಕಾಲುವೆಯ 18ನೇ ಮತ್ತು 21ನೇ ವಿತರಣಾ ಕಾಲುವೆಗಳಲ್ಲಿ 2004-05ನೇ ಸಾಲಿನಿಂದ ನೀರನ್ನು ಬಿಡಲಾಗುತ್ತಿದ್ದು, ನಿಗದಿತ ಪ್ರಮಾಣದಲ್ಲಿ ಕಾಲುವೆ ಕೊನೆಯ ಅಂಚಿನವರೆಗೂ ತಲುಪಿಸಲು ಸಾಧ್ಯವಾಗಿರುವುದಿಲ್ಲ.

ಆ) ಹಾಗಿಲ್ಲದಿದ್ದಲ್ಲಿ, ಇದಕ್ಕೆ ಕಾರಣಗಳೇನು;

ಈ ಕೆಳಕಂಡ ಕಾರಣಗಳಿಂದ ಕಾಲುವೆ ಕೊನೆಯ ಅಂಚಿನವರೆಗೂ ತಲುಪಿಸಲು ಸಾಧ್ಯವಾಗಿರುವುದಿಲ್ಲ.

1. ಮಳೆ ನೀರಿನ ಕೊರೆತದಿಂದ ಕಾಲುವೆಯಲ್ಲಿ ಅಲ್ಲಲ್ಲಿ ಹೂಳು ತುಂಬಿದ್ದರಿಂದ.
2. ರೈತರು ಅನಧಿಕೃತವಾಗಿ ಕಾಲುವೆಯ ಸೇವಾ ರಸ್ತೆಯನ್ನು ಒಡೆದು ನೀರನ್ನು ತಮ್ಮ ಹೊಲಗಳಿಗೆ ಹಾಯಿಸಿಕೊಂಡಿದ್ದರಿಂದ.